# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಪ್ರ.ದ.ಸ/
ಸಭೆಯ ನಡವಳಿ/ಸಂಖ್ಯೆ. /2022-23

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ :

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-** ದಿನಾಂಕ. 175.09.2022 ರಂದು ನಡೆದ ವಾರ್ಡ್ ಸಂಖ್ಯೆ 109ರ ಸಮಿತಿ ಸಭೆಯ ನಡವಳಿಗಳು.

**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21,
ದಿ. 21.09.2020.

**ಸ್ಥಳ:** ಬಿಬಿಎಂಪಿ ಕಛೇರಿ, ಮಾಗಡಿ ರಸ್ತೆ, 4ನೇ ಕ್ರಾಸ್,

**ಸಮಯ:** ಬೆಳಿಗ್ಗೆ 12.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| | | |
|---|---|---|
| 1 | ಶ್ರೀಮತಿ ಹೇಮಲತ ಜೆ. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. |
| 2 | ಶ್ರೀ ರಾಜಪ್ಪ | ಸಹಾಯಕ ಕಂದಾಯ ಅಧಿಕಾರಿ |
| 3 | ಶ್ರೀ ವಿ.ಶಂಕರ್ | ಕಾರ್ಯದರ್ಶಿ |
| 4 | ಶ್ರೀ ಎಂ. ಶಿವಪ್ರಸಾದ್ | ಕಂದಾಯ ನಿರೀಕ್ಷಕರು |
| 5 | ಶ್ರೀ ಕಿಷನ್.ಟಿ | ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ 109 |
| 6 | ಶ್ರೀ ಯೋಗೇಶ್ | ವೈದ್ಯಾಧಿಕಾರಿಗಳು |
| 7 | ಶ್ರೀ ಜಗದೀಶ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 8 | ಶ್ರೀ ಪಿ. ರಾಜು | ಹಿರಿಯ ಆರೋಗ್ಯ ನಿರೀಕ್ಷಕರು |

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.**

1. ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಜೆ. ಹೇಮಲತ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಇತರೆ ಸದಸ್ಯರು ಮತ್ತು ಕಾರ್ಯದರ್ಶಿಯವರ ಸಮ್ಮುಖದಲ್ಲಿ ಪ್ರಾರಂಭಿಸಲಾಯಿತು.
2. ವಾರ್ಡ್ ವ್ಯಾಪ್ತಿಯ ಓಬಯ್ಯ ಗಲ್ಲಿಯಲ್ಲಿನ ಕಸದ ಸಮಸ್ಯೆಯನ್ನು ಬಗೆಹರಿಸಲು ಸಾರ್ವಜನಿಕರಾದ ಮಹದೇವ ರವರು ತಿಳಿಸಿರುತ್ತಾರೆ.
3. ಮನವರ್ತಿಪೇಟೆ ಆಸ್ಪತ್ರೆಯ ಮುಂಭಾಗದಲ್ಲಿ ಘನತ್ಯಾಜ್ಯದ ವಾಹನಗಳು ಕಸವನ್ನು ತುಂಬಿಸಿಕೊಂಡು ನಿಂತಿದ್ದು ಇದರಿಂದ ಆಸ್ಪತ್ರೆಯ ರೋಗಿಗಳಿಗೂ ಸಾರ್ವಜನಿಕರಿಗೂ ತೊಂದರೆಯಾಗುತ್ತಿರುವ ಬಗ್ಗೆ ಆಸ್ಪತ್ರೆಯ ವೈದ್ಯಾಧಿಕಾರಿಯವರು ತಿಳಿಸಿರುತ್ತಾರೆ
4. ಅಕ್ಕಿಪೇಟೆ ಮುಖ್ಯರಸ್ತೆಯಲ್ಲಿನ ಮಳೆ ನೀರು ಚರಂಡಿಯ ಮೇಲಿನ ಮುಚ್ಚಳವು ಹಾಳಾಗಿದ್ದು ದುರಸ್ಥಿಪಡಿಸಲು ಮಹದೇವ್ ರವರು ಅಗ್ರಹಿಸಿರುತ್ತಾರೆ.

5. ಕೆ.ವಿ ಟೆಂಪಲ್ ರಸ್ತೆಯ ಹಳೆ ವಾರ್ಡ್ ಕಛೇರಿ ಮುಂದಿನ ರಸ್ತೆಯ ಕೊನೆಯಲ್ಲಿ ಚರಂಡಿ ಮೇಲಿನ ಡೆಕ್‌ಸ್ಲಾಬ್ ಮುರಿದುಹೋಗಿರುವ ದೂರು ನೀಡಿರುತ್ತಾರೆ.

6. ವಾರ್ಡ್ ಸಮಿತಿ ಸಭೆಯನ್ನು ವಾರ್ಡ್‌ನಲ್ಲಿರುವ ಯಾವುದಾದರೊಂದು ಸ್ಥಳದಲ್ಲಿ ಅಂದರೆ ವಾರ್ಡ್ ಮಿತಿಯಲ್ಲಿಯೇ ಮಾಡಲು ಚರ್ಚಿಸಲಾಗಿರುತ್ತದೆ.

ಮಾನ್ಯ ನೋಡಲ್ ಅಧಿಕಾರಿಯವರು ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕೆಂದು ತಿಳಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ನಿರ್ಣಯ:-**

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಮುಂದಿನ ಸಭೆಯೊಳಗಾಗಿ ಶೀಘ್ರವಾಗಿ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.

V. S

ಕಾರ್ಯದರ್ಶಿ

ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ. 109

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :**

1. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಛೇರಿ ಕಡತಕ್ಕೆ.